# ದ್ವಿಭಾಷಾ ಮಾಧ್ಯಮ ವಿಭಾಗದ ವಿದ್ಯಾರ್ಥಿಗಳಿಗೆ ಪರ್ಯಾಯ ಶೈಕ್ಷಣಿಕ ಯೋಜನೆ-2021-22

ತರಗತಿ: 1 ಕಲಿಕಾ ಪೂರ್ವಸಿದ್ಧತಾ ಯೋಜನೆ ವಿಷಯ: ಕನ್ನಡ

| ದಿನ | ಕಲಿಕಾಂಶ | ಪರ್ಯಾಯ ಬೋಧನಾ ಕಲಿಕಾ ತಂತ್ರಗಳು | ಸಂಪನ್ಮೂಲಗಳು | ಮೌಲ್ಯಮಾಪನ ಮತ್ತು ದಾಖಲೆಗಳು |
|---|---|---|---|---|
| ದಿನ 1 | ಆಲಿಸುವುದು:<br>ಕವಿತೆ/ಶಿಶುಗೀತೆ ಆಲಿಸಿ ಶಿಕ್ಷಕರನ್ನು ಅನುಸರಿಸಿ ಹಾಡುವರು. | • ಶಿಕ್ಷಕರು ಕೊಟ್ಟಿರುವ ಕವಿತೆ/ ಶಿಶುಗೀತೆಯನ್ನು ರಾಗವಾಗಿ ಹಾಡುವುದು ಮಕ್ಕಳು ತಮ್ಮನ್ನು ಅನುಸರಿಸುವಂತೆ ನೋಡಿಕೊಳ್ಳುವುದು.<br>• 4 ಕವಿತೆಗಳ ಮುದ್ರಿತ ಹಾಳೆಯನ್ನು ನೀಡಿದ್ದು ಅವುಗಳನ್ನು ಬಳಸಿ ಅಭ್ಯಾಸ ಮಾಡಿಸುವುದು | ಕವಿತೆಯ ಮುದ್ರಿತ ಹಾಳೆ 1 - ಸೋಮಾರಿ ತಿಮ್ಮ, ಗಾಳಿಪಟ. ಮೈಸೂರುಪಾಕು ಕವಿತೆಗಳು. | ಕವಿತೆ ಹಾಡುವರು |
| ದಿನ 2 | ಆಲಿಸಿದ ಕವಿತೆಯನ್ನು ಪುನರುಚ್ಚರಿಸುವರು ಹಾಗೂ ಅದರಲ್ಲಿ ಬರುವ ಪ್ರಾಸ ಪದಗಳನ್ನು ಗುರುತಿಸುವರು | • ಯೂಟ್ಯೂಬ್ ಆಡಿಯೋ/ವೀಡಿಯೋ ಬಳಸಿ ಮಕ್ಕಳಿಗೆ ಕವಿತೆ ಕೇಳಿಸುವುದು ನಂತರ ಮಕ್ಕಳು ಸ್ವತಂತ್ರವಾಗಿ ಹಾಡಲು ಪ್ರೇರೇಪಿಸುವುದು.<br>• ಕವಿತೆಯಲ್ಲಿ ಬರುವ ಪ್ರಾಸ ಪದಗಳನ್ನು ಗುರುತಿಸಿ ಹೇಳಲು ಸಹಾಯ ಮಾಡುವುದು | | ಪ್ರಾಸ ಪದಗಳನ್ನು ಗುರುತಿಸುವರು |
| ದಿನ 3 | | • ಶಿಶುಗೀತೆಯನ್ನು ರಾಗವಾಗಿ ಅಭಿನಯದೊಂದಿಗೆ ಹಾಡಲು ಮಾರ್ಗದರ್ಶಕರು ಮಕ್ಕಳಿಗೆ ಅಭ್ಯಾಸ ಮಾಡಿಸುವುದು. | | |
| ದಿನ 4 | ಕಥೆಯನ್ನು ಆಲಿಸಿ ಪಾತ್ರಗಳನ್ನು ಗುರುತಿಸುವರು ಹಾಗೂ ಸರಳ ಪ್ರಶ್ನೆಗೆ ಉತ್ತರಿಸುವರು. | • ಶಿಕ್ಷಕರು ಕೊಟ್ಟಿರುವ ಚಿತ್ರ ಕಥೆ 'ಬೇಟೆಗಾರ ಮತ್ತು ಪಾರಿವಾಳ' ಹಾಗೂ 'ಟೋಪಿ ಮಾರುವವನು ಮತ್ತು ಕೋತಿಗಳು' ಬಳಸಿ ಹಾವಭಾವಗಳೊಂದಿಗೆ ಮಕ್ಕಳಿಗೆ ಆಸಕ್ತಿ ಮೂಡುವಂತೆ ನಿರೂಪಣೆ ಮಾಡುವುದು. | ಮುದ್ರಿತ ಚಿತ್ರ ಕಥೆ. | ಕತೆಯನ್ನು ಆಲಿಸಿ ಸರಳ ಪ್ರಶ್ನೆಗಳಿಗೆ ಉತ್ತರಿಸುವರು. |
| ದಿನ 5 | | • ಕಥೆಯನ್ನು ಮಾರ್ಗದರ್ಶಕರು ಯೂಟ್ಯೂಬ್ ವೀಡಿಯೋ ತೋರಿಸುತ್ತಾ ಹೇಳುವುದು.<br>• ನಿರೂಪಣೆಯ ನಡುವೆಯೇ ಚಿಕ್ಕ ಚಿಕ್ಕ ಪ್ರಶ್ನೆಗಳನ್ನು ಕೇಳಿ ಉತ್ತರ ಪಡೆಯುವುದು | ವೀಡಿಯೋ ಲಿಂಕ್. | |
| ದಿನ 6 | | • ಕಥೆಯಲ್ಲಿ ಬರುವ ಪಾತ್ರಗಳನ್ನು ಪರಿಚಯಿಸುವುದು, ಮಕ್ಕಳು ಆಲಿಸಿದ ಕಥೆಯನ್ನು ಗ್ರಹಿಸಿ ಹೇಳಲು | | ಆಲಿಸಿ ಗ್ರಹಿಸಿದ ಕಥೆಯನ್ನು ಹೇಳುವರು |

| | | | | |
|---|---|---|---|---|
| | | ಪ್ರೇರೇಪಿಸುವುದು. | | ಹಾಗೂ ಪಾತ್ರಗಳನ್ನು ಗುರುತಿಸುವರು. |
| ದಿನ 7 | ಮಾತನಾಡುವ ಕೌಶಲ: ತನ್ನ ಹಾಗೂ ಕುಟುಂಬದ ಸದಸ್ಯರನ್ನು ಹೆಸರಿಸುವರು / ಪರಿಚಯಿಸುವರು | • ಮಗು ತನ್ನನ್ನು ತಾನು ಪರಿಚಯಿಸಿಕೊಳ್ಳುತ್ತಾನೆ. ಮಾರ್ಗದರ್ಶಕರು ತಮ್ಮನ್ನು ಪರಿಚಯಿಸಿಕೊಂಡು ಮಾದರಿಯಾಗಿ ತೋರಿಸುವ ಮೂಲಕ ಮಗುವಿಗೆ ಸಹಾಯ ಮಾಡುವುದು. | | ಮಗು ತನ್ನ ಪರಿಚಯವನ್ನು ಮಾಡಿಕೊಡುವರು |
| ದಿನ 8 | | • ಮಗು ತನ್ನ ಕುಟುಂಬದ ಸದಸ್ಯರನ್ನು ಪರಿಚಯಿಸಲು ಹೇಳುವುದು.<br>• ಉದಾ: ನನ್ನ ತಂದೆಯ ಹೆಸರು...... ನನ್ನ ತಾಯಿಯ ಹೆಸರು....... | | ಕುಟುಂಬದ ಪರಿಚಯವನ್ನು ಮಾಡಿಕೊಡುವರು |
| ದಿನ 9 | ಮನೆ/ಶಾಲೆ ತನ್ನ ಸುತ್ತಮುತ್ತಲಿನ ಪರಿಸರದಲ್ಲಿ ಕಾಣುವ ವಸ್ತುಗಳನ್ನು ಗುರುತಿಸುವರು ಹಾಗೂ ಅವುಗಳ ಕುರಿತು ಮಾತನಾಡುವರು. | • ಮಗು ತನ್ನ ಮನೆಯಲ್ಲಿ ಇರುವ ವಸ್ತುಗಳನ್ನು ಗುರುತಿಸಿ ಹೆಸರಿಸುವನು.<br>• ಗುರುತಿಸಿದ ವಸ್ತುಗಳ ಕುರಿತು ಅವುಗಳ ಉಪಯೋಗದ ಬಗ್ಗೆ ಒಂದೆರಡು ವಾಕ್ಯಗಳಲ್ಲಿ ಹೇಳುವರು. - ಉದಾ: ಟಿ.ವಿ – ಟ,ವಿಯಲ್ಲಿ ದಿನಾಲೂ ದಾರವಾಹಿ ನೋಡುತ್ತೇವೆ.<br>• ಮಕ್ಕಳು ತಮ್ಮದೇ ಮಾತುಗಳಲ್ಲಿ ಹೇಳಲು ಅವಕಾಶ ಕೊಡುವುದು | | ವಸ್ತುಗಳನ್ನು ಗುರುತಿಸಿ ಹೆಸರಿಸುವರು ಹಾಗೂ ಅವುಗಳ ಉಪಯೋಗದ ಬಗ್ಗೆ ತಿಳಿಸುವರು |
| ದಿನ 10 | | • ಮಗು ಸುತ್ತಮುತ್ತಲಿನ ಪರಿಸರದಲ್ಲಿ ಕಾಣುವ ವಸ್ತು ವಿಷಯಗಳನ್ನು ಗುರುತಿಸಿ ಹೆಸರಿಸಲು ಹಾಗೂ ವಿವರಿಸಲು ಸಹಾಯ ಮಾಡುವುದು. ಉದಾ: ಅಂಗಡಿ, ಮರ, ಶಾಲೆ | | |
| ದಿನ 11 | | • ಸುತ್ತಮುತ್ತಲಿನ ಪರಿಸರದಲ್ಲಿ ಕಾಣುವ ಪ್ರಾಣಿ/ಪಕ್ಷಿಗಳನ್ನು ಗುರುತಿಸಿ ಹೆಸರಿಸುವರು& ಪರಿಚಯಿಸುವರು.<br>• ಮಾರ್ಗದರ್ಶಕರು ವಿವಿದ ಪ್ರಾಣಿಗಳ ಚಿತ್ರಗಳನ್ನು ತೋರಿಸಿ ಅವುಗಳ ಬಗ್ಗೆ ಮಾತನಾಡಲು ಪ್ರೇರೇಪಿಸುವರು. | | |
| ದಿನ 12 | ಚಿತ್ರ ಸಹಿತ ಪದಗಳನ್ನು ಗುರುತಿಸಿ ಓದುವರು | • ಚಿತ್ರ ನೋಡಿ ಗುರುತಿಸಲು ಹೇಳುವುದು<br>• ಮಾರ್ಗದರ್ಶಕರು ಚಿತ್ರಸಹಿತ ಪದಗಳಿರುವ ಕಾರ್ಡ್ ಗಳನ್ನು ತೋರಿಸಿ ಚಿತ್ರ ಹಾಗೂ ಪದಗಳನ್ನು ಗುರುತಿಸಲು ಸಹಾಯ ಮಾಡುವರು | ಪ್ರಾಣಿಗಳು, ಮರಗಳು,ಬಣ್ಣಗಳ ಕಾರ್ಡ್‌ಗಳು | |

| | | | | |
|---|---|---|---|---|
| ದಿನ 13 | | • ಚಿತ್ರ ಸಹಿತ ಪದಗಳನ್ನು ಗುರುತಿಸಿದ ನಂತರ ಚಿತ್ರಗಳನ್ನು ಮುಚ್ಚಿ ಪದಗಳನ್ನು ಗುರುತಿಸಲು ಅಭ್ಯಾಸ ಮಾಡಿಸುವುದು. | ಚಿತ್ರ ಸಹಿತ ಪದಗಳ ಮುದ್ರಿತ ಹಾಳೆ | |
| ದಿನ 14 | ಚಿತ್ರಗಳಿಗೆ ಬಣ್ಣ ಹಾಕುವರು, ಅಪೂರ್ಣ ಚಿತ್ರಗಳನ್ನು ಪೂರ್ಣಗೊಳಿಸುವರು. | • ನೀಡಿದ ಚಿತ್ರಗಳಿಗೆ ಮಕ್ಕಳು ತಮ್ಮ ಆಯ್ಕೆಯ ಬಣ್ಣ ಹಾಕುವರು<br>• ಅಪೂರ್ಣ ಭಾಗವನ್ನು ಬಿಡಿಸುವರು | ಚಿತ್ರಗಳ ಕಾರ್ಡ್ | ಚಿತ್ರಗಳಿಗೆ ಬಣ್ಣ ಹಾಕುವರು. |
| ದಿನ 15 | | • ಅಪೂರ್ಣ ಚಿತ್ರಗಳನ್ನು ಪೂರ್ಣಗೊಳಿಸಿ ಬಣ್ಣ ಹಾಕಲು ಹೇಳುವುದು.<br>• ವಿವಿಧ ಚಿತ್ರಗಳ ಹಾಳೆಗಳನ್ನು ನೀಡಿದ್ದು ಬಣ್ಣದ ಪೆನ್ಸಿಲ್ ನಿಂದ ಬಣ್ಣ ತುಂಬಲು ಅಭ್ಯಾಸ ಮಾಡಿಸುವುದು. | ಅಪೂರ್ಣ ಚಿತ್ರಗಳ ಹಾಳೆ | ಚಿತ್ರಗಳನ್ನು ಪೂರ್ಣಗೊಳಿಸುವರು ಮತ್ತು ಬಣ್ಣ ಹಾಕುವರು. |
| ದಿನ 16 | ಮೌಲ್ಯ ಮಾಪನ | • ಹಿಂದಿನ 15 ದಿನಗಳಲ್ಲಿ ಕಲಿತ ಕಲಿಕಾಂಶಗಳನ್ನು ಆಧರಿಸಿ ಆಲಿಸುವ, ಮಾತನಾಡುವ ಚಟುವಟಿಕೆಗಳನ್ನು ಮಾಡಿಸಿ ಆಡಿಯೋ/ವೀಡಿಯೋ ದಾಖಲೆ ನಿರ್ವಹಿಸುವುದು.<br>• ಚಿತ್ರ ನೋಡಿ ಪದ ಗುರುತಿಸುವ, ಬಣ್ಣ ಹಾಕುವ ಚಟುವಟಿಕೆ ಮಾಡಿಸುವುದು. | | |